ಕುಳಿತುಕೊಳ್ಳಲು ಪ್ರಯತ್ನವನ್ನು ಮಾಡಿ. ಇಲ್ಲದಿದ್ದರೆ ಈ ಸ್ಥಾನ ಬೇಡವೆಂದು ನೀವು ಹೊರಗಡೆ ಬನ್ನಿ. ಇಲ್ಲದಿದ್ದರೆ ನೀವು ಈ ಬೇಡಿಕೆಗಳನ್ನು ಈಡೇರಿಸಬೇಕು. ಒಂದು ಗಂಟೆ ಇಂತಹ ಬಜೆಟ್‌ನ ದಪ್ಪ ಪುಸ್ತಕವನ್ನು ನಿಮಗೆ ಶಕ್ತಿ ಇತ್ತು ನೀವು ಓದಿದಿರಿ, ಆದರೆ ಇದರಿಂದ ನಿಮಗೆ ಏನು ಪ್ರಚಾರ ಸಿಕ್ಕಿದೆ, ಅದಕ್ಕೆ ಅನುಗುಣವಾದಂಥ ಯಾವುದೇ ಕಾರ್ಯಕ್ರಮಗಳಿಲ್ಲದ ಬಜೆಟ್ ಇದು ಎಂದು ನಾನು ವಿರೋಧವನ್ನು ಮಾಡಿ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

6. ಪ್ರಕಟಣೆ

ಅಧ್ಯಕ್ಷರು : ದಿನಾಂಕ 21ನೇ ಜುಲೈ, 2004ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ವಿಧಾನ ಸಭೆಯ ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

1. ದಿನಾಂಕ 23ನೇ ಜುಲೈ, 2004ರಿಂದ ಪ್ರತಿದಿನ ಬೆಳಿಗ್ಗೆ 10-00 ಗಂಟೆಗೆ ಅಧಿವೇಶನ ಸಮಾವೇಶಗೊಳ್ಳುವುದು.

2. ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.	ಜುಲೈ 23 ರಿಂದ 27 ರವರೆಗೆ
3. ಬೇಡಿಕೆಗಳ ಮೇಲಿನ ಚರ್ಚೆ, ಸರ್ಕಾರದಿಂದ ಉತ್ತರ ಹಾಗೂ ಅಂಗೀಕರಿಸುವುದು	ಜುಲೈ 28 ಹಾಗೂ 29 ರಂದು

4. ದಿನಾಂಕ 6ನೇ ಆಗಸ್ಟ್, 2004ರವರೆಗೆ ಪ್ರಸ್ತುತ ಅಧಿವೇಶನವನ್ನು ನಡೆಸಲು ತೀರ್ಮಾನಿಸಲಾಗಿದೆ.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ. ಈಗ ಸದನವನ್ನು ನಾಳೆ ದಿನಾಂಕ: 23-7-04ರಂದು ಬೆಳಿಗ್ಗೆ: 10 ಗಂಟೆ ವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಾಯಂಕಾಲ 5 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 23-7-2004 ರಂದು ಬೆಳಿಗ್ಗೆ: 10.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

7. ಅನುಬಂಧ I

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

41 (312): ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಸಾಲಿನಲ್ಲಿ ರೈತ ಗ್ರಾಹಕರು ವಿದ್ಯುತ್ ಬಾಕಿ ಪಾವತಿಸಿದ ಮೊತ್ತ ಎಷ್ಟು;

ಆ) ನೀರಾವರಿ ಪಂಪ್ ಸೆಟ್ ಬಳಕೆದಾರರ ಬಾಕಿ ಮೊತ್ತವನ್ನು ಈ ಹಿಂದಿನ ಸರ್ಕಾರ ಮನ್ನಾಮಾಡಿರುವುದು ನಿಜವೆ;

ಇ) ಅಂತಹ ನೀರಾವರಿ ಪಂಪು ಸೆಟ್ ಬಳಕೆದಾರರ ಸಂಖ್ಯೆ ಎಷ್ಟು:

ಈ) ಈಗಾಗಲೇ ಪಾವತಿ ಮಾಡಿರುವ ರೈತರ ವಿದ್ಯುತ್ ಬಾಕಿಯನ್ನು ಮನ್ನಾ ಆದೇಶದನ್ವಯ ಹಿಂತಿರುಗಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಸಿದ್ದವಿದೆಯೆ;

ಉ) ಹಾಗಿದ್ದಲ್ಲಿ ಈ ಬಾಕಿ ಮನ್ನಾದ ಹಣವನ್ನು ರೈತರಿಗೆ ಯಾವಾಗ ಹಿಂದಿರುತಿಸಲಾಗುವುದು;

ಊ) ಸದರಿ ಹಣ ವಾಪಸಾತಿ ಮಾಡುವಲ್ಲಿ ವಿಳಂಬವಾಗಿರಲು ಕಾರಣವೇನು;

ಋ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಸರ್ಕಾರದಿಂದ ಬರಬೇಕಾಗಿರುವ ಮೊತ್ತವೆಷ್ಟು; (ವಿವರ ನೀಡುವುದು)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಳೆದ ಸಾಲಿನಲ್ಲಿ (2003–04) ರೈತರು ಪಾವತಿಸಿದ ವಿದ್ಯುತ್ ಬಾಕಿಯ ಮೊತ್ತ ರೂ. 68.6 ಕೋಟಿ ರೂ.ಗಳು.

ಆ) ಒಂದೇ ಬಾರಿ ಕ್ರಮವಾಗಿ ಈ ಹಿಂದಿನ ಸರ್ಕಾರ 31.3.2003ರ ಅಂತ್ಯದವರೆಗಿನ ನೀರಾವರಿ ಪಂಪುಸೆಟ್ಟು ಬಳಕೆದಾರರ ಬಾಕಿಯನ್ನು ಮನ್ನಾ ಮಾಡಿತು.

ಇ) ರೈತರ ಪರಿಹಾರ ಪ್ಯಾಕೇಜ್‌ನ ಫಲಾನುಭವಿ ನೀರಾವರಿ ಪಂಪುಸೆಟ್ಟು ಬಳಕೆದಾರರ ಸಂಖ್ಯೆ: 13.90.320.

ಈ) ವಿದ್ಯುತ್ ಬಿಲ್ಲುಗಳಲ್ಲಿ ಹೊಂದಾಣಿಕೆ ಮೂಲಕ ನೀರಾವರಿ ಪಂಪು ಸೆಟ್ಟು ಬಳಕೆದಾರರಿಗೆ ಹಣವನ್ನು ಹಿಂದಿರುಗಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಕ್ರಮಗಳನ್ನು ಕೈಗೊಂಡಿರುತ್ತದೆ.

ಉ) ಮನ್ನಾ ಮಾಡಲಾದ ಹಣವನ್ನು ಭವಿಷ್ಯದ ವಿದ್ಯುತ್ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಲಾಗುವುದು.

ಊ) ಹೊಂದಾಣಿಕೆಗೆ ಈಗಾಗಲೇ ಕ್ರಮಗಳನ್ನು ಜರುಗಿಸಲಾಗಿದೆ.

ಋ) ದಿನಾಂಕ : 31.3.2004 ರಲ್ಲಿದ್ದಂತೆ ಸರ್ಕಾರದಿಂದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಬರಬೇಕಾಗಿರುವ ಹಣದ ಒಟ್ಟು ಮೊತ್ತ 4098.84 ಕೋಟಿ ರೂ.ಗಳು ವಿವರಗಳು ಕೆಳಕಂಡಂತಿವೆ.

	ಕೋಟಿ ರೂ.ಗಳಲ್ಲಿ
31.3.2004 ರವರೆಗಿನ ರೆವಿನ್ಯೂ ಸಹಾಯಧನ	2336.12
31.3.2003ರ ರವರೆಗಿನ ನೀರಾವರಿ ಪಂಪುಸೆಟ್ಟುಗಳ ಬಾಕಿಯ ಮನ್ನಾ ಹಣದ ಒಟ್ಟು ಮೊತ್ತ	618.28
31.3.2004 ರವರೆಗಿನ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ದರಗಳಲ್ಲಿನ	126.00

ಸಹಾಯ ಧನ ಪ್ರತಿ ಹೆಚ್.ಪಿ.ಗೆ ವಾರ್ಷಿಕ ರೂ. 720 ಮತ್ತು ರೂ. 540 ರೂಪಾಯಿಗಳ ವ್ಯತ್ಯಾಸದ ಹಣ)	
ಮಲೆನಾಡು ಪ್ರದೇಶಗಳಲ್ಲಿ ವಿದ್ಯುತ್ ದರಗಳ ತಾರ್ಕಿಕ ಹೊಂದಾಣಿಕೆ	15.00
ಹುಕ್ಕೇರಿ ಸೊಸೈಟಿಗೆ ಪರವಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ನಿರ್ವಹಿಸುತ್ತಿರುವ ಸಾಲ ತೀರುವಳಿ ಸೇವೆ	15.73
ಕರ್ನಾಟಕ ಸರ್ಕಾರದ ಪರವಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ನಿರ್ವಹಿಸುತ್ತಿರುವ ಸಾಲ ತೀರುವಳಿ ಸೇವೆ.	339.33
ಪಿಂಚಣಿ ಬಾಕಿ:	47.00
(2002–03ರೂ. 30 ಕೋಟಿ (2003–04 ರೂ. 17 ಕೋಟಿ)	
ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಿಂದ ಬರಬೇಕಾಗಿರುವ ಬಾಕಿ ಹಣದ ಮೊತ್ತ	601.38
ಒಟ್ಟು	**4098.84**

.....

42 (282): ಶ್ರೀ ಶಿವಾನಂದ ನಾಯ್ಕ (ಭಟ್ಕಳ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾವರ ಬಳಿ ಶರಾವತಿ ನದಿಗೆ ಅಡ್ಡಲಾಗಿ ಸೇತುವೆ ಯಾವಾಗ ನಿರ್ಮಿಸಲಾಯಿತು! ಈ ಸೇತುವೆ ನಿರ್ಮಾಣಕ್ಕೆ ಆದ ವೆಚ್ಚ ಎಷ್ಟು?

ಆ) ನಿರ್ಮಾಣ ಪೂರ್ಣಗೊಳಿಸಿದ ವರ್ಷದಿಂದ ಇಲ್ಲಿಯವರೆಗೆ ಸೇತುವೆ ದುರಸ್ತಿಗಾಗಿ ತಗುಲಿದ ವರ್ಷಾವಾರು ವೆಚ್ಚವೆಷ್ಟು?

ಇ) ಸೇತುವೆ ದುರಸ್ತಿ ಕಾರ್ಯಗಳಿಗಾಗಿ ಹಾಕಿರುವ ಕಮಾನು ಯಾವಾಗ ತೆಗೆಯಲಾಗುವುದು?

ಈ) ಗರಿಷ್ಟ ಎಷ್ಟು ಟನ್ ತೂಕದ ವಾಹನಗಳು ಸೇತುವೆ ಮೇಲೆ ಓಡಾಡಲು ಅನುಮತಿ ನೀಡಲಾಗಿದೆ?

ಉ) ಸೇತುವೆ ಶುಲ್ಕ ವಸೂಲಾತಿಯಿಂದ ಇಲ್ಲಿಯವರೆಗೆ ಗಳಿಸಿದ ವರ್ಷಾವಾರು ಆದಾಯ ಎಷ್ಟು? ಶುಲ್ಕ ವಸೂಲಾತಿಯನ್ನು ಇನ್ನು ಎಷ್ಟು ವರ್ಷದವರೆಗೆ ಮುಂದುವರೆಸಲಾಗುವುದು?